ನಿಮ್ಮ ಹಾಗೆ ಜಗಳ ಮಾಡಲಿಕ್ಕಾ?' ಅದಕ್ಕೆ ಅಮ್ಮನ ಉತ್ತರ ಇರಲಿಲ್ಲ.

ತನ್ನ ಅಮ್ಮನ ಪ್ರಾಪಂಚಿಕ ದೃಷ್ಟಿಕೋನವು ಸಾಂಪ್ರದಾಯಿಕ ಆಯ್ಕೆಯ ಮಿತಿಯೊಳಗೇ ಇರುತ್ತಿದ್ದವು ಎನ್ನುವುದು ಅವಳಿಗೆ ಗೊತ್ತಿತ್ತು. ತದ್ವಿರುದ್ಧವಾಗಿ ಅವಳ ತಂದೆಯಾದರೋ ಆ ಯಾವುದೇ ಆಯ್ಕೆಗಳ ಬಗ್ಗೆ ತಲೆಬಿಸಿ ಮಾಡಿಕೊಳ್ಳುವ ಜಾಯಮಾನದವನೇ ಅಲ್ಲ. ಅಮ್ಮನ ನಿಲುವಿನ ಬಗ್ಗೆ, ಅವಳ ದೃಷ್ಟಿಕೋನದ ಬಗ್ಗೆ, ಕೊನೆಗೆ ಎಲ್ಲಿಯವರೆಗೆಂದರೆ ಅವಳ ಬುದ್ಧಿಮತ್ತೆಯ ಬಗ್ಗೆಯೇ ತಮಾಷೆ ಮಾಡಿ ಅವಳನ್ನು ಗಾಳಿಗೆ ಹಿಡಿಯುವುದೆಂದರೆ ಆತನಿಗೆ ಆದೊಂದು ಆಟವೇ ಆಗಿತ್ತು. ಆ ಆಟದಲ್ಲಿ ತಂದೆಯೊಡನೆ ದನಿಗೂಡಿಸುವುದು ಮಕ್ಕಳಿಬ್ಬರಿಗೂ ಚಿಕ್ಕಂದಿನಿಂದಲೇ ಅಭ್ಯಾಸವಾಗಿ ಹೋಗಿತ್ತು. ಅಪ್ಪನಾದರೂ ಹಲ್ವದ ತುಂಡನ್ನು ಚಪ್ಪರಿಸಿದಂತೆ ಅಮ್ಮನ ಮೌಢ್ಯವನ್ನು ಆಹ್ಲಾದಿಸುತ್ತಿರುತ್ತಾನೆಂದು ಅವಳಿಗೆ ಎಷ್ಟೋ ಸಲ ಅನಿಸುತ್ತಿದ್ದುದಿತ್ತು.

ಕೆಲವು ಹೇಳಿಕೆಗಳು, ಟೀಕೆ–ಟಿಪ್ಪಣಿಗಳು ಮಿತಿಮೀರುತ್ತ ಹೋಗುವಾಗ ಅದು ಅವಳ ಅಮ್ಮನ ಮುಖದ ಸ್ನಾಯುಗಳನ್ನು ಅದುರಿಸಿ, ಕಣ್ಣುಗಳನ್ನು ತೀಕ್ಷ್ಣಗೊಳಿಸಿ, ನಾಲಗೆಯಲ್ಲಿ ಕಹಿರುಚಿ ಬಂದಂತೆ ಬಾಯಿಯನ್ನು ತಿರುಗಿಸುತ್ತಿತ್ತು. ಆಗೆಲ್ಲ ಪವನಳಿಗೆ ಇದ್ದಕ್ಕಿದ್ದಂತೆ ಅಮ್ಮನ ಮೇಲೆ ಕರುಣೆ ಉಕ್ಕುತ್ತಿದ್ದುದಿತ್ತು. ಆದರೆ, ಅದೆಲ್ಲ ಅವಳು ಬೆಳೆದು ದೊಡ್ಡವಳಾದಂತೆ, ಕಾಲೇಜು ಕಲಿಯುತ್ತಿದ್ದಾಗ ಅಥವಾ ಮುಂದೆ ಕೆಲಸಕ್ಕೆ ಸೇರಿದ ಮೇಲೆ ಅಂದರೆ ಮನೆಯಿಂದ ದೂರ ಇದ್ದು ಅವನ್ನೆಲ್ಲ ನೆನಸಿಕೊಳ್ಳುವಾಗ.

ಕೂದಲಿಗೆ ಎಣ್ಣೆ ಹಚ್ಚುತ್ತಿದ್ದ ಅವಳ ತಾಯಿಯ ಕೈಬೆರಳುಗಳು ಶಸ್ತ್ರಕ್ರಿಯಾತಜ್ಞನೊಬ್ಬನ ಬೆರಳುಗಳಷ್ಟು ನಿಖರವಾಗಿ, ತ್ವರಿತವಾಗಿ ಅವಳ ತಲೆಯ ಮೇಲೆ ಓಡುತ್ತಿದ್ದವು. ಅವಳ ವೇಗದ ಬೆರಳುಗಳ ನಡುಕವೂ, ಸೀರೆಯ ಸೆರಗಿನೆಡೆಯಿಂದ ಕೇಳುತ್ತಿದ್ದ ತೀವ್ರಗತಿಯ ಹೃದಯದ ಮಿಡಿತವೂ ಕಣ್ಣು ಮುಚ್ಚಿ ಕುಳಿತಿದ್ದ ಪವನಳ ಅನುಭವಕ್ಕೆ ಬರುತ್ತಿದ್ದವು. ಕೊನೆಯಲ್ಲಿ ಕೂದಲನ್ನೆಲ್ಲ ಸೀಟಿ ಒಪ್ಪಮಾಡಿ ತಿಪ್ಪಿ, ಎತ್ತರದಲ್ಲೊಂದು ಗಂಟು ಹಾಕುತ್ತಿರುವಾಗ ತನ್ನ ಆಸೆ, ಕನಸುಗಳನ್ನೆಲ್ಲ ಆ ಗಂಟಿನೊಳಗೆ ತುಂಬುತ್ತಿದ್ದಾಳೇನೋ ಎಂಬಂತಾಗಿ ಗಂಟು ಭಾರವೆನಿಸಿತು.

ಅಷ್ಟರಲ್ಲಿ ಚೆಸ್ ಬೋರ್ಡಿನೊಂದಿಗೆ ಬಂದ ಅವಳ ತಂದೆ, 'ಬಾ ಬಾ, ಒಂದು ಆಟ,' ಎನ್ನುತ್ತ ಬೋರ್ಡನ್ನು ಟೀಪಾಯಿಯ ಮೇಲೆ ಇಟ್ಟು ಜೋಡಿಸತೊಡಗಿದ್ದರು. 'ಒಂದೇ ಆಟ,' ಎಂದು ನಗುತ್ತ ಅವಳು ಮೇಲೆದ್ದು ಕುರ್ಚಿಯಲ್ಲಿ ತಂದೆಗೆದುರಾಗಿ ಕುಳಿತಳು. 'ಸುರುವಾಯ್ತು ಇವರದ್ದು,' ಎನ್ನುತ್ತ ಅವಳ ಅಮ್ಮ ಒಳಗೆ ಹೋದಳು.

ಚೆಸ್ ಬೋರ್ಡು, ಬದಿಯಲ್ಲೇ ಹುರಿದ ನೆಲಗಡಲೆಯ ತಟ್ಟೆ, ಕರಿದ ಬಾಳೆಕಾಯಿಯ ಚಿಪ್ಸ್ ತುಂಬಿದ ಇನ್ನೊಂದು ತಟ್ಟೆ ಎಲ್ಲವೂ ಸಿದ್ಧವಾಗಿದ್ದವು. ಜೊತೆಯಲ್ಲೇ, 'ಎರಡು ಕಪ್ ಬಿಸಿಬಿಸಿ ಕಾಫೀ...' ಎಂದು ಒಳಗಿದ್ದ ಹೆಂಡತಿಗೆ ಕೂಗಿ ಹೇಳಿದ್ದೂ ಆಯಿತು. ಡಬ್ಬಿಯಲ್ಲಿದ್ದ ಎಳ್ಳುಂಡೆಯೂ ಬರಲಿ ಎಂಬ ಅಪ್ಪನ ಆದೇಶ ಕೇಳಿ ಪವನಳಿಗೆ ಸುಮ್ಮನಿರಲಾಗಲಿಲ್ಲ, 'ಇದೇನಪ್ಪ, ಡಯಾಬಿಟಿಸ್ ಉಂಟು, ಎಳ್ಳುಂಡೆ ಯಾಕೆ ಈಗ?' ಎಂದಳು. ಅಮ್ಮನೂ ಸೇರಿಕೊಂಡಳು, 'ನಾನು ಹೇಳಿದರೆ ಸಸಾರ... ಮೈ ಬೆಳೆದಿದೆ ಸ್ವಲ್ಪವಾ? ಹೊಟ್ಟೆ ನೋಡು ಅವರದ್ದು...' ಹೌದಲ್ಲ, ಒಂದು ಕಾಲದಲ್ಲಿ ಕ್ರಿಕೆಟ್ ಟೂರ್ನಮೆಂಟ್, ಇಂಟರ್ ಬ್ಯಾಂಕ್ ಮ್ಯಾಚ್ ಎಂದು ಎಲ್ಲೆಲ್ಲೋ ತಿರುಗಾಟ ಮಾಡುತ್ತಿದ್ದ ಅಪ್ಪ ಈಗ ಹೇಗಾಗಿದ್ದಾನೆ ಎಂದುಕೊಂಡಳು ಪವನ.

'ನನ್ನ ಹೊಟ್ಟೆ ಸುದ್ದಿ ತೆಗೆದರೆ ಜಾಗ್ರತೆ, ಮೊದಲು ನಿನ್ನ ಹೊಟ್ಟೆ ನೋಡಿಕೊ.' ಮರುತ್ತರ ಮೊನಚಾಗಿ ಬಂದಿತ್ತು. ಅಮ್ಮನೂ ಇತ್ತೀಚೆಗೆ ದಪ್ಪಾಗಾಗುತ್ತಿದ್ದಾಳೆ, ಮೊದಲಿನಂತೆ ಮುತುವರ್ಜಿ ವಹಿಸಿ ಅಲಂಕಾರ ಮಾಡಿಕೊಳ್ಳುವುದನ್ನೂ ಬಿಟ್ಟ ಹಾಗಿದೆ ಎಂದು ಅಮ್ಮನ ಸಡಿಲಾದ ನೈಟಿ, ಎಣ್ಣೆ